ಎಂದು ಕೇಳಿಸಿರುತ್ತದೆ ಎಂದು ಅಂದಾಜಿಸಿದೆ. ಅಷ್ಟಕ್ಕೂ, ಅವನು ಕೂಡ ಬಹಳ ಕಾಲದಿಂದ ನನ್ನನ್ನು ಅಳೆಯುತ್ತಿದ್ದ ಎನ್ನುವುದರಲ್ಲಿ ನನಗೆ ಅನುಮಾನವಿರಲಿಲ್ಲ.

"ನಿನಗೆ ಕೊಟ್ಟಿರುವ ಎಲ್ಲ ವ್ಯವಸ್ಥೆಗಳು ಸರಿಯಾಗಿವೆಯೇ? ನೀನು ಸಂತೋಷವಾಗಿದ್ದೀ ತಾನೇ?" ಮಗುವನ್ನು ಲಾಲಿಸಿ ಮಲಗಿಸುವ ಮುನ್ನ ಕೊಡುವ ಒಂದು ಲೋಟ ಬೆಚ್ಚಗಿನ ಹಾಲಿನಂತಿದ್ದ ದನಿಯಲ್ಲಿ ಕೇಳಿದ. ಬೆರಳ ತುದಿಯನ್ನು ಅದ್ದಿ ನನ್ನ ವೈಯಕ್ತಿಕ ಕಾವನ್ನು ಅಳೆಯುವ ಹುನ್ನಾರವಿರಬೇಕೆನಿಸಿತು.

ಉದ್ದಕ್ಕೂ ಕಿಸಿದು, ''ಅದ್ಭುತವಾಗಿದೆ'' ಎಂದು ಸೌಜನ್ಯಕ್ಕಾದರೂ ಹೇಳುತ್ತೇನೆಂದು ಅವನು ಅಂದುಕೊಂಡಿದ್ದನೇನೋ ಗೊತ್ತಿಲ್ಲ. ''ಸದ್ಯಕ್ಕೆ ತೊಂದರೆಯಿಲ್ಲ'' ಎಂದು ಹೇಳಿ, ಅಗತ್ಯವಿದ್ದಲ್ಲಿ ಖಂಡಿತ ದೂರು ಕೊಡುತ್ತೇನೆ ಎನ್ನುವ ಸಾಧ್ಯತೆಯ ಬಾಗಿಲನ್ನು ಅಷ್ಟೇ ನಾಜೂಕಾಗಿ ತೆರೆದಿಟ್ಟೆ.

''ನಾವು ನಮ್ಮ ಉದ್ಯೋಗಿಗಳ ಅಗತ್ಯಗಳನ್ನು, ದೂರಗಳನ್ನು ಕೇಳಲು ಯಾವಾಗಲೂ ಸಿದ್ಧ. ಬೇಕಾದಲ್ಲಿ ನೇರ ನನಗೇ ಮಿಂಚಂಚೆ ಕಳಿಸು'' ಎಂದು ಅವನ ಖಾಸಗಿ ದೂರವಾಣಿ ಸಂಖ್ಯೆ ಮತ್ತು ಇ–ಮೇಲ್ ವಿಳಾಸಗಳಿದ್ದ ಕಾರ್ಡನ್ನು ಮುಂದೊಡ್ಡಿದ.

ಮುಂದೇನು ಹೇಳುವುದಿದೆ? ಎನ್ನುವ ನೋಟ ಹರಿಸಿ ಅದನ್ನು ತಗೊಂಡು, ''ನೋ ಪ್ರಾಬ್ಲಂ'' ಎನ್ನುವ ಪದವನ್ನು ವಿನಿಮಯಿಸಿದೆ. ಬರಿಯದೊಂದು ಕಾರ್ಡ್ ಕೊಟ್ಟು ಕ್ಷೇಮ ಸಮಾಚಾರ ವಿಚಾರಿಸಲು ಬಂದಿಲ್ಲ ಎಂಬ ಅರಿವು ಇಬ್ಬರಲ್ಲೂ ಇತ್ತು.

ಕಾರ್ಪೊರೇಟ್ ವಲಯದಲ್ಲಿ ಮಾತಿನ ದಾಳಗಳನ್ನು ಹೇಗೆ ಉರುಳಿಸಬೇಕೆನ್ನುವುದನ್ನು ಕಲಿಸುತ್ತಾರೆ. ಸಂಭಾಷಣೆಯ ಮೊದಲಿಗೆ ಮೂರು ಬಾರಿ ''ಯಸ್'' ಎಂದು ಎದುರು ಕೂತ ವ್ಯಕ್ತಿಯ ಬಾಯಲ್ಲಿ ಹೊರಡಿಸಲು ನಾವು ಸಮರ್ಥರಾದರೆ, ಅವರಿಂದ ಮುಂದಿನ ವ್ಯವಹಾರಕ್ಕೂ ''ಯಸ್'' ಎನ್ನಿಸಿಕೊಳ್ಳಲು ಅದು ಪೀಠಿಕೆಯಾಗುತ್ತದಂತೆ. ಅಥವಾ ಅಂತಹ ಸರಳ ಸುಲಭ ವ್ಯಕ್ತಿತ್ವವನ್ನು ಅದು ಬಯಲುಮಾಡುತ್ತದಂತೆ.

ಅದನ್ನು ಬಹಳ ಎಚ್ಚರಿಕೆಯಿಂದ ನಾನು ತಡೆದದ್ದನ್ನು ಅವನು ಗಮನಿಸಿದ. ನೇರ ವಿಷಯಕ್ಕಿಳಿಯದೆ ನನ್ನದು ಮರುಳಾಗುವ ಮಂಡೆಯಲ್ಲ ಅನ್ನಿಸಿತೇನೋ. ಥಟ್ಟನೆ ಆ ಹಾದಿಯನ್ನು ಬಿಟ್ಟು ನೇರ ಮಾತಿಗಿಳಿದ.

''ನಿನ್ನ ಗಳಿಕೆಯ ಸ್ಪ್ರೆಡ್ ಶೀಟ್ ನೋಡುತ್ತಿದ್ದೆ. ನಿಜಕ್ಕೂ ಇಂಪ್ರೆಸ್ಡ್. ಎರಡೇ ದಿನಕ್ಕೆ ನಿನ್ನ ದುಡಿಮೆ ಐದು ದಿನ ದುಡಿಯುವವರಿಗಿಂತ ಹೆಚ್ಚಿದೆ'' ಅಂದು ನನ್ನ ಪ್ರತಿಕ್ರಿಯೆಗೆ ಕಾದ. ಹೊಗಳಿಕೆಗೆ ಬಗ್ಗದ ಕೋಣವಿಲ್ಲ ಎಂಬ ಎರಡನೆಯ ಸುತ್ತದು.

'ನನ್ನ ಇತರೆ ಮೂರು ದಿನಗಳ ಕೆಲಸವನ್ನು ನೀನು ನೋಡಿಲ್ಲ' ಎಂದರೆ ನನ್ನನ್ನು ನಾನೇ ಹೊಗಳಿಕೊಂಡಂತಾಗುತ್ತಿತ್ತು. ಆದರೆ ಆ ಮೂರು ದಿನಗಳಲ್ಲಿ ನಾನು ಬೇರೆಡೆ ಕೆಲಸ ಮಾಡುತ್ತಿದ್ದೆ. ಅಲ್ಲಿನ ನನ್ನ ಕೆಲಸದ ಬಗ್ಗೆಯೂ ಅವನು ಕೇಳಿರಬಹುದು ಅಥವಾ ಪ್ರಯತ್ನಪಟ್ಟು ತಿಳಿದುಕೊಂಡೇ ಬಂದಿರಬಹುದು ಎನ್ನಿಸಿ ಹೇಗೆ ಉತ್ತರಿಸುವುದೆಂದು ತಿಳಿಯದೆ ಪಿಳಿ ಪಿಳಿ ನೋಡಿದೆ. ಅದನ್ನು ಬಹಳ ಉತ್ತೇಜಕವಾಗಿ ತೆಗೆದುಕೊಂಡ ಅವನು,

"ನಿನ್ನ ಸಹೋದ್ಯೋಗಿ ರಾಜ್ ಇದ್ದಾನಲ್ಲ? ನಿನ್ನಷ್ಟೇ ಓದಿ ತರಬೇತಿ ಪಡೆದಿದ್ದೂ ಈ ವಿಚಾರದಲ್ಲಿ ಇಡೀ ವರ್ಷದಲ್ಲಿ ಎಷ್ಟು ಗಳಿಸುತ್ತಾನೆ ಗೊತ್ತೇ?'' ಅಂತ ಪ್ರಶ್ನಿಸಿದ.

ನಾನು ಸುಮ್ಮನಿದ್ದೆ. ಅಷ್ಟಕ್ಕೂ ಅದನ್ನು ತಿಳಿದುಕೊಂಡು ಆಗಬೇಕಾದದ್ದು ನನಗೇನೂ ಇರಲಿಲ್ಲ. ಅವನಿಗೆ ಸರಿ ಎನ್ನಿಸುವಷ್ಟು ಅವನು, ನನ್ನ ಕೈಲಾಗುವಷ್ಟು ನಾನು ದುಡಿಯುತ್ತ, ಆರಾಮಾಗಿರುವ ನಮ್ಮ ನಡುವಿನ ಹೋಲಿಕೆಯಿಂದ ಸಾಧಿಸುವುದಾದರೂ ಏನಿತ್ತು?